ಬಹುತ್ವವೆನ್ನುವುದು ಈ ನೆಲದ ಬಹುಮುಖ್ಯ ಲಕ್ಷಣವೂ ಹೌದು, ಬಂಡವಾಳವೂ ಹೌದು. ಈ ಮಣ್ಣಿನ ಸಾಂಸ್ಕೃತಿಕ ಕ್ರಿಯಾಶೀಲತೆಯ ಸಾಕ್ಷಿಯೂ ಹೌದು.



ಪ್ರೊ.ಎಚ್. ಟಿ. ಪೋತೆ ಅವರೊಂದಿಗೆ ಸಂದರ್ಶಕ ಸತ್ಯಮಂಗಲ ಮಹಾದೇವ

ಮೂವರೂ ತಮ್ಮ ಕಾಲದ ಸಾಂಸ್ಕೃತಿಕ, ರಾಜಕೀಯ ಆಗುಹೋಗುಗಳಿಗೆ ಪ್ರತಿಕ್ರಿಯಿಸಿದ ಸ್ವರೂಪಗಳೇ ಉತ್ತಮ ಮಾದರಿಗಳೆಂಬುದು ನನ್ನ ಅನಿಸಿಕೆ. ಅವುಗಳ ಮಾದರಿಗಳಲ್ಲಿಯೇ ನಾವು ಇಂದು ನಮ್ಮ ತಲ್ಲಣಗಳಿಗೆ ಅನುಗುಣವಾಗಿ ಅವುಗಳಿಗೆ ಪ್ರತಿಕ್ರಿಯಿಸಬೇಕಾಗಿದೆ. ಅದು ನಮ್ಮ ಹೊಣೆಗಾರಿಕೆಯೂ ಹೌದು.

◆ **ನನ್ನಂತಹ ಯುವ ಬರಹಗಾರರು ಭಾರತವನ್ನು ನೋಡುವಾಗ ಇದು ಉಳ್ಳವರ ಭಾರತ ಮತ್ತು ಇಲ್ಲದವರ ಭಾರತ ಎಂದು ಎರಡು ಭಾರತವಾಗಿ ಕಾಣುತ್ತಿದೆ. ಇದಕ್ಕೆ ತಮ್ಮ ಅನಿಸಿಕೆ?**

ಅದು ಹಿಂದೆಯೂ ಇತ್ತು, ಈಗಲೂ ಇದೆ, ಮುಂದೆಯೂ ಇರುತ್ತದೆ. ವರ್ತಮಾನದಲ್ಲಿ ಆಗುತ್ತಿರುವ ರಾಜಕೀಯ ಮತ್ತು ಆರ್ಥಿಕ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಉಳ್ಳವರ ಮತ್ತು ಇರುವವರ ನಡುವಿನ ಅಂತರ ಕೊನೆಯಾಗುವ ಲಕ್ಷಣಗಳು ಕಾಣಿಸುತ್ತಿಲ್ಲ.

◆ **ಇಂದಿನ ಜಾಗತಿಕರಣದ ದಿನಮಾನಗಳಲ್ಲಿ ಲೇಖಕರ ಸವಾಲುಗಳು ಯಾವುವು?**

ಸವಾಲುಗಳು ಯಾವ ಕಾಲಕ್ಕಿಲ್ಲ? ಎಲ್ಲಾ ಕಾಲಕ್ಕೂ ಇವೆ. ಸವಾಲುಗಳನ್ನು ಜಾಣತನದಿಂದ ಮೀರುವುದರಲ್ಲಿಯೇ ಬರಹಗಾರನ ಜಾಣತನವಿರುತ್ತದೆ. ರಾಜನ ಆಸ್ಥಾನದಲ್ಲಿದ್ದೂ ಪಂಪ ಪರೋಕ್ಷವಾಗಿ ಅಧಿಕಾರವನ್ನು ವಿರೋಧಿಸಲಿಲ್ಲವೆ? ಬಸವಣ್ಣ 'ಆನು ಅಂಜುವೆನೆ ಈ ಬಿಜ್ಜಳಂಗೆ' ಎಂದು ಹೇಳಲಿಲ್ಲವೆ? ಅಂಬೇಡ್ಕರ್ ಅವರು ಮಂತ್ರಿಪದವಿಗೆ ರಾಜೀನಾಮೆ ಕೊಡಲಿಲ್ಲವೆ? ಕಾಲಕ್ಕನುಗುಣವಾಗಿ ಅವುಗಳ ರೂಪ-ಸ್ವರೂಪಗಳು ಬದಲಾಗುತ್ತಿರುತ್ತವಷ್ಟೆ. ಇಂದು ಉದಾರೀಕರಣಕ್ಕೊಳಗಾಗಿ ವಿಶ್ವ ವಿಶಾಲವಾಗುತ್ತಿದೆ. ಬದುಕುಗಳು ಸಂಕುಚಿತಗೊಳ್ಳುತ್ತಿವೆ. ಈ ನಿಟ್ಟಿನಲ್ಲಿ ಹೊಸ ಆಲೋಚನಾ ಮಾದರಿಗಳು ಹುಟ್ಟಿಕೊಳ್ಳಬೇಕಿದೆ. ಕಾಲಕಾಲಕ್ಕೆ ಮೂಡಿಬರುವ ಎಚ್ಚರದ ಪ್ರಜ್ಞೆಯಂತೆ ಪ್ರಸ್ತುತ ಸಹ ಎಚ್ಚರದ ಪ್ರಜ್ಞೆ ಮೂಡಿ ಅನುಭವದ ಪರಿಧಿ ವಿಸ್ತರಣೆಗೊಳ್ಳಬೇಕಾಗಿದೆ. ಹೊಸ ಹೊಸ ಅರ್ಥಗಳನ್ನು ಧ್ವನಿಸುವ ರೂಪಕಗಳು ಹುಟ್ಟಿಕೊಳ್ಳಬೇಕಾಗಿದೆ. ಅದಕ್ಕೆ ಒಂದು ಬಗೆಯ ತಯಾರಿಯ ಅಗತ್ಯವಿದೆ.

◆ **ಆಸ್ಟ್ರೇಲಿಯಾ ಸೇರಿದಂತೆ ವಿವಿಧ ದೇಶಗಳ ವಿಶ್ವವಿದ್ಯಾಲಯಗಳಲ್ಲಿ ತಾವು ವಿದ್ವತ್‌ಪೂರ್ಣ ಪ್ರಬಂಧಗಳನ್ನು ಮಂಡಿಸಿದ್ದೀರಿ. ಆ ಅನುಭವವನ್ನು ಹಂಚಿಕೊಳ್ಳಬಹುದೇ?**

ಆ ಅನುಭವಗಳನ್ನು ಈಗಾಗಲೇ ಪ್ರವಾಸಿ ಕಥನದ ರೂಪದಲ್ಲಿ ಒಂದು ಭಾಗವನ್ನು ಹೊರತಂದಿದ್ದೇನೆ. ನನ್ನ ನೆಲದಲ್ಲಿ ನಿಂತು ನನ್ನ ನೆಲದ ಬಗೆಗೆ ಮಾತನಾಡುವುದಕ್ಕೂ, ಅನ್ಯ ನೆಲದಲ್ಲಿ ನಿಂತು ನನ್ನ ನೆಲದ ಬಗ್ಗೆ ಮಾತನಾಡುವುದಕ್ಕೂ ತುಂಬಾ ವ್ಯತ್ಯಾಸವಿದೆ. ಅಲ್ಲೂ ಅಸ್ಪೃಶ್ಯತೆ ಬೆನ್ನು ಬಿಡಲಿಲ್ಲ! ●